ಅ) ಫೆಬ್ರವರಿ–06 ರಿಂದ ಜೂನ್–06ರ ಅಂತ್ಯದವರೆಗೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ 2658 ಕುಡಿಯುವ ನೀರಿನ ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ.

ಆ) ಒಟ್ಟಾರೆ ಈ ಅವಧಿಯಲ್ಲಿ ರಾಜ್ಯ ಕೇಂದ್ರ ಮತ್ತು ವಿದೇಶಿ ನೆರವಿನ ಯೋಜನೆಗಳು ಸೇರಿದಂತೆ ರೂ. 288.00 ಕೋಟಿ ಹಣ ಬಿಡುಗಡೆಯಾಗಿದೆ. ಈ ಅನುದಾನದವತಿಯಿಂದ ಪಂಚಾಯತ್ ರಾಜ್ ಸಂಸ್ಥೆಗಳು ಕುಡಿಯುವ ನೀರಿನ ಬೋರ್‌ವೆಲ್‌ಗಳ ವೆಚ್ಚವನ್ನು ಚಾಲ್ತಿ ಮಾರ್ಗದರ್ಶಿಗಳ ಪ್ರಕಾರ ಭರಿಸಲು ಕ್ರಮ ವಹಿಸುತ್ತವೆ.

ಇ) ಮತ್ತು ಈ) ಕುಡಿಯುವ ನೀರಿನ ಯೋಜನೆಗಳಿಗೆ ಅಗತ್ಯವಿರುವ ಪೈಪುಗಳು ಮತ್ತು ಮೋಟಾರ್ ಪಂಪುಗಳನ್ನು ಅಳವಡಿಸಲು ಸಂಬಂಧಿಸಿದ ಪಂಚಾಯತ್ ರಾಜ್ ಸಂಸ್ಥೆಗಳು ಕ್ರಮವಹಿಸುತ್ತವೆ. ತುರ್ತು ಕಾರ್ಯಪಡೆ ಮುಖೇನ ಕೊರೆದಿರುವ ಕೊಳವೆ ಬಾವಿಗಳಿಗೆ ಅಗತ್ಯವಿರುವ ಸಲಕರಣೆಗಳ ವೆಚ್ಚ ಸಲುವಾಗಿ ಜಿಲ್ಲಾವಾರು ಲಭ್ಯವಿರುವ ವಿಕೋಪ ಪರಿಹಾರ ನಿಧಿ (CRF) ಬಳಸಿ ತ್ವರಿತವಾಗಿ ಕುಡಿಯುವ ನೀರು ಪೂರೈಕೆ ಯೋಜನೆಗಳನ್ನು ಕಾರ್ಯಗತ ಗೊಳಿಸಬಹುದಾಗಿದೆ.

1326(1592) : ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಲಾನಯನದ ಅಭಿವೃದ್ಧಿ ಚಟುವಟಿಕೆಗಳು ಸಂಪನ್ಮೂಲಗಳ ಸಂರಕ್ಷಣೆ ಬಗ್ಗೆ ಸಂಬಂಧಿಸಿದ ಸಮಸ್ಯೆಗಳನ್ನು ನೀಗಿಸಲು ಸರ್ಕಾರ ಘೋಷಿಸಿರುವಂತೆ ಕಾರ್ಯಕ್ರಮಗಳ ಪರಿಶೀಲನೆ ನಡೆಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) –

ಅ) ಮತ್ತು ಆ) ಪ್ರಸ್ತುತ ಜಾರಿಯಲ್ಲಿರುವ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನೆಗಾಗಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

1327 (1593) : ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಆಯವ್ಯಯದಲ್ಲಿ ಘೋಷಿಸಿರುವಂತೆ "ಮಳೆ ನೀರು ಸುಗ್ಗಿ" ಕಾರ್ಯತಿಯಡಿಯಲ್ಲಿ ಒಣ ಭೂಮಿಯ ಭಾಗದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಾಕಷ್ಟು ನೀರು ದೊರಯುವಂತಾಗಲು 50,000 ಸುವರ್ಣ ಕೃಷಿ